ನೀರಿನ ವ್ಯವಸ್ಥೆಯನ್ನು ಮಾಡಲು 1990ರಲ್ಲಿ ಬೋರ್‌ವೆಲ್ ಕೊರೆದಿದ್ದು ಆದರೆ ಬೋರ್‌ವೆಲ್‌ನಿಂದ ನೀರು ಬರದೇ ಇದ್ದುದರಿಂದ ಕುಡಿಯುವ ನೀರಿನ ವ್ಯವಸ್ಥೆಯನ್ನು ಪುರಸಭೆಯ ವತಿಯಿಂದ ಮಾಡಬೇಕೆಂದು ತಿಳಿಸಿದ್ದೇವೆ. ಅದನ್ನು ಮಾಡಿಸುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು:- ಮಾನ್ಯ ಶಿವಪ್ಪನವರೇ, ನಿಮ್ಮ ಪ್ರಶ್ನೆಗೆ ಅಲ್ಲೇ ಉತ್ತರ ಇದೆ. ಇನ್ನೂ ಕೆಲವು ಮೂಲಭೂತ ಸೌಕರ್ಯಗಳನ್ನು ಕಲ್ಪಿಸದೇ ಇರುವುದರಿಂದ ವಾಸಕ್ಕೆ ಇನ್ನೂ ಪೂರ್ಣ ಯೋಗ್ಯ ಆಗಿಲ್ಲ. ಆದ್ದರಿಂದ ಈಗ ತೆಗೆದುಕೊಂಡಿರುವವರೂ ಹೋಗಿಲ್ಲ, ಬೇರೆ ಜನ ಅರ್ಜಿಯನ್ನು ಕೊಟ್ಟಿಲ್ಲ. ವಾಸಕ್ಕೆ ಯೋಗ್ಯವಾದ ಮನೆಗಳನ್ನು ಮಾಡಿದ ತಕ್ಷಣ ಬಹುಶಃ ಎಲ್ಲರೂ ಬರುತ್ತಾರೆಂದು ಕಾಣುತ್ತದೆ. ಅದಕ್ಕೆ ಈಗಾಗಲೇ ಹಣವನ್ನು ಬಿಡುಗಡೆ ಮಾಡಿದ್ದು ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವ ವ್ಯವಸ್ಥೆ ಮಾಡುತ್ತಿದ್ದೇನೆಂದು ಹೇಳಿದ್ದಾರೆ.

ಶ್ರೀ ಬಿ.ಬಿ.ಶಿವಪ್ಪ:- ಮಾನ್ಯ ಅಧ್ಯಕ್ಷರೆ, ಅಷ್ಟು ಮಾತ್ರ ಅಲ್ಲ. ಕಟ್ಟಿರತಕ್ಕ ಕಟ್ಟಡಗಳು ತೀರಾ ಕಳಪೆ ಕಟ್ಟಡಗಳು ಇವೆ. ಹಾಗಾಗಿ ಯಾರೂ ವಾಸಕ್ಕೆ ಹೋಗಲಿಕ್ಕೆ ಇಷ್ಟಪಡುತ್ತಿಲ್ಲ. ಸಕಲೇಶಪುರದಲ್ಲಿ ಮನೆಗೆಳಿಗೆ ತುಂಬಾ ಬೇಡಿಕೆ ಇದೆ. ಮತ್ತು ಇವರು ನಿಗದಿಪಡಿಸಿದ ಮೊದಲಿನ ಬೆಲೆ ಮತ್ತು ಇವತ್ತು ಇವರು ಹೇಳುತ್ತಿರತಕ್ಕ ಬೆಲೆಗೆ ಅಜಗಜಾಂತರ ವ್ಯತ್ಯಾಸ ಇದೆ. ಹೀಗಾಗಿ ಸರ್ಕಾರದ ಹಣ ಯಾವ ಒಂದು ಸದುಪಯೋಗದಿಂದ ಈ ವ್ಯವಸ್ಥೆ ಮಾಡಲಾಯಿತು, ಅದು ಸದುಪಯೋಗ ಆಗತಕ್ಕಂಥ ವ್ಯವಸ್ಥೆಗೆ ಬರಲಿಲ್ಲ. ಆಗುವ ಹಂತದಲ್ಲೂ ಕೂಡ ಇಲ್ಲ. ಮಾನ್ಯ ಮಂತ್ರಿಗಳು ನಮ್ಮ ಜಿಲ್ಲೆಯವರೇ ಆಗಿದ್ದಾರೆ. ಸಾಕಷ್ಟು ಲಕ್ಷ ರೂಪಾಯಿ ಖರ್ಚಾಗಿ ಬಿಟ್ಟಿರುವುದರಿಂದ ಈ ಅವ್ಯವಹಾರ ಏನು ನಡೆದಿದೆ, ಕಳಪೆ ಕೆಲಸವನ್ನು ಯಾರು ಮಾಡಿದ್ದಾರೆ, ಅವರ ಮೇಲೆ ಕ್ರಮ ತೆಗೆದುಕೊಂಡು ಕಟ್ಟಡವನ್ನು ವಾಸಕ್ಕೆ ಅನುಕೂಲ ಆಗುವ ರೀತಿಯಲ್ಲಿ ಮಾಡಿ ತಕ್ಷಣ ಹಂಚತಕ್ಕ ಒಂದು ವ್ಯವಸ್ಥೆಯನ್ನು ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಕೇಳುತ್ತೇನೆ.

ಶ್ರೀ ಹೆಚ್.ಡಿ.ರೇವಣ್ಣ:- ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಏನು ಸಲಹೆ ಕೊಟ್ಟಿದ್ದಾರೆ ಅದರ ಬಗ್ಗೆ ಸಮಗ್ರ ತನಿಖೆ ಮಾಡಿ ಕಾನೂನು ರೀತಿ ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ.

ವಿಷಯ:- ಬೆಂಗಳೂರು ನಗರ ಸಾರಿಗೆ ಬಸ್‌ಗಳಲ್ಲಿ ಮಹಿಳೆಯರಿಗೆ ಮೀಸಲಾಗಿಟ್ಟಿರುವ ಆಸನಗಳ ಸದುಪಯೋಗದ ಬಗ್ಗೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 10 (181)

ಶ್ರೀಮತಿ ಪ್ರಮೀಳಾ ನೇಸರ್ಗಿ (ಚಾಮರಾಜಪೇಟೆ):- ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಬೆಂಗಳೂರು ನಗರ ಸಾರಿಗೆಯ ಬಸ್‌ಗಳಲ್ಲಿ ಮಹಿಳೆಯರಿಗೆ ಮೀಸಲಾಗಿರಿಸಿದ್ದರೂ ಆ ಆಸನಗಳಲ್ಲಿ ಪುರುಷರು ಕುಳಿತುಕೊಳ್ಳುತ್ತಿದ್ದು, ಇದರಿಂದಾಗಿ ಮಹಿಳಾ ಪ್ರಯಾಣಿಕರಿಗೆ ಆಗುತ್ತಿರುವ ಅನಾನುಕೂಲದ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಮಹಿಳಾ ಪ್ರಯಾಣಿಕರಿಗೆ ಮೀಸಲಿಟ್ಟಿರುವ ಆಸನಗಳಲ್ಲಿ ಪ್ರಯಾಣಿಸಲು ಮಹಿಳೆಯರಿಗೆ ಕೊಡಿಸುವ ಬಗ್ಗೆ ತೀವ್ರ ಕ್ರಮ ತೆಗೆದುಕೊಳ್ಳಲು ಸರ್ಕಾರ ಆಲೋಚಿಸಿದೆಯೇ?

ಇ) ಬೆಂಗಳೂರು ನಗರ ಸಾರಿಗೆಯ ಬಸ್ಸುಗಳಲ್ಲಿ ಮಹಿಳೆಯರಿಗೆ ಆಸನಗಳ ಮೀಸಲಾತಿಯ ನೀತಿಯನ್ನು ಪರಿಣಾಮಕಾರಿಯಾಗಿ ಜಾರಿಗೆ ತರಲು ಸರ್ಕಾರವು ಮಸೂದೆಯನ್ನು ತರುವುದೇ?

ಶ್ರೀ ಪಿ.ಜಿ.ಆರ್.ಸಿಂದ್ಯಾ (ಸಾರಿಗೆ ಸಚಿವರು):-

ಅ) ಹೌದು.

ಆ) ಹೌದು.

ಇ) ಪುರುಷ ಪ್ರಯಾಣಿಕರು ಮೀಸಲಾತಿ ಆಸನಗಳನ್ನು ಅಕ್ರಮಿಸಿಕೊಂಡಿದ್ದಲ್ಲಿ ಸದರಿ ಆಸನಗಳನ್ನು ಮಹಿಳೆಯರಿಗೆ ದೊರಕಿಸಿಕೊಡಲು ಸಹಾಯ ಮಾಡಬೇಕೆಂದು ನಿರ್ವಾಹಕರಿಗೆ ಆದೇಶ ನೀಡಲಾಗಿದೆ. ಒಂದು ವೇಳೆ ಪುರುಷ ಪ್ರಯಾಣಿಕರು ಸೀಟು ಬಿಟ್ಟುಕೊಡಲು ನಿರಾಕರಿಸಿದ ಸಂದರ್ಭದಲ್ಲಿ ಬಸ್ ಸಿಬ್ಬಂದಿಯವರು ಬಸ್ಸನ್ನು ಸಮೀಪದ ಪೋಲೀಸ್ ಠಾಣೆಗೆ ಒಯ್ದು ಅಂತಹ ಪುರುಷ ಪ್ರಯಾಣಿಕರ ವಿರುದ್ಧ ದೂರು ದಾಖಲು ಮಾಡಿಸಲು ಅಧಿಕಾರಯುಕ್ತರಾಗಿರುತ್ತಾರೆ. 1989ನೇ ಕೆ.ಎಂ.ವಿ.ರೂಲ್ಸ್ 94ರ ()ನೇ ಉಪನಿಯಮದ ಪ್ರಕಾರ ಮಹಿಳೆಯರಿಗಾಗಿ ಕಾಯ್ದಿರಿಸಿದ ಸೀಟುಗಳನ್ನು ಪುರುಷರು ಅಕ್ರಮಿಸುವುದು ಅಪರಾಧವಾಗುತ್ತದೆ. ಮತ್ತು 1988ನೇ ಎಂ.ವಿ.ಆಕ್ಟ್‌ನ ಸೆಕ್ಷನ್ 177ರ ಅಡಿಯಲ್ಲಿ ಕ್ರಮ ತೆಗೆದುಕೊಳ್ಳಬಹುದಾಗಿದೆ.

1996ರ ಫೆಬ್ರವರಿ ತಿಂಗಳಿನಲ್ಲಿ ಯಶವಂತಪುರ ಮತ್ತು ಜೆ.ಪಿ.ನಗರ ಪೋಲೀಸ್ ಠಾಣೆಯಲ್ಲಿ ಒಂದೊಂದು ಇಂತಹ ಪ್ರಕರಣ ದಾಖಲಾಗಿರುತ್ತದೆ.

ಅಧ್ಯಕ್ಷರು:- ಏನು ಪ್ರಶ್ನೆ ಇದು? ನಮಗೆಲ್ಲಾ ಸೀಟು ಕಿತ್ತುಕೊಂಡಿದ್ದಾರೆ. ಆದರೂ ಈ ಪ್ರಶ್ನೆ.

ಶ್ರೀಮತಿ ಪ್ರಮೀಳಾ ನೇಸರ್ಗಿ:- ಮಾನ್ಯ ಸಭಾಧ್ಯಕ್ಷರೆ, ಹಲವಾರು ಬಾರಿ ಈ ಪ್ರಶ್ನೆ ಈ ಸದನದಲ್ಲಿ ಬಂದಿದೆ.

ಅಧ್ಯಕ್ಷರು:- ನಮ್ಮ ಎಲ್ಲಾ ಸೀಟನ್ನು ತೆಗೆದುಕೊಂಡು ಬಿಟ್ಟು ಮತ್ತೆ ಈ ಸೀಟಿಗೂ ಬಂದಿದ್ದೀರಿ, ನೋಡಿ; ಮತ್ತೆ ನಮ್ಮ ತಕರಾರು ಮಾಡಲು.

+ಶ್ರೀಮತಿ ಪ್ರಮೀಳಾ ನೇಸರ್ಗಿ:- ಸಿಗುತ್ತಲೇ ಇಲ್ಲವಲ್ಲಾ! ಏನು ಸೀಟು ಇಲ್ಲ ಎಂದರೂ ಅಟ್‌ಲೀಸ್ಟ್ ಬಸ್‌ನಲ್ಲಿ ಒಂದು ಹೆಣ್ಣು ಮಕ್ಕಳಿಗೆ ಸೀಟು ರಿಸರ್ವ್ ಮಾಡಿದರೆ ಅದೂ ಕೂಡ ಸಿಗುವುದಿಲ್ಲ ಎಂದರೆ ಏನು ಮಾಡುವುದು ಅಧ್ಯಕ್ಷರೇ? ನೀವಂತೂ ಇಲ್ಲ ಬಿಡಿ. ನಮ್ಮ ಸಾರಿಗೆ ಸಚಿವರು ಬಂದ ನಂತರ ನಾನು ಏನೋ ಬಸ್‌ನಲ್ಲಿ ಮಹಿಳೆಯರಿಗೆ ಮೀಸಲಾಗಿರತಕ್ಕಂಥ ಸೀಟುಗಳು ಸಿಗುತ್ತವೆ ಎಂದು ಅಂದುಕೊಂಡಿದ್ದೆ. ಮೊನ್ನೆ ವಿದ್ಯಾರ್ಥಿನಿ ಒಬ್ಬರು ಕಾಲೇಜಿಗೆ ಬರತಕ್ಕವರು ರೂಟ್ ನಂಬರ್ 20ರಲ್ಲಿ ಬಸ್‌ನಲ್ಲಿ ಬಂದರೆ ಬಿಹೇವಿಯರ್ಸ್ ಆಫ್ ಡ್ರೈವರ್ಸ್ ಹಾಗೂ ಕಂಡಕ್ಟರ್ಸ್ ಹೇಗೆ ಇತ್ತು ಎಂದು ತಮಗೆ ನಿದರ್ಶನ ಕೊಡುತ್ತಿದ್ದೇನೆ. 20ನೇ ರೂಟ್ ಬಸ್‌ನಲ್ಲಿ 6.30ರಿಂದ 6.45ರಲ್ಲಿ ನಾಲ್ಕನೇ ಬ್ಲಾಕ್‌ನಿಂದ ಹೊರಟ ಮಹಿಳೆ. ಮಹಿಳೆಯರ ಸೀಟುಗಳನ್ನು ಪೂರ್ತಿ ಮಹನೀಯರು ಆಕ್ಯುಪೈ ಮಾಡಿಕೊಂಡಿದ್ದರು. ಆ ಮಹಿಳೆ ಕೇಳಿದರು ಸೀಟ್ ಬಿಡಿಸಿಕೊಡಿ ಎಂದು. ಕಂಡಕ್ಟರ್ ಅವರು ಯಾವ ರೀತಿ ಉತ್ತರ ಕೊಡುತ್ತಾರೆ ಎನ್ನುವುದನ್ನು ದಯವಿಟ್ಟು ತಾವು ಕೇಳಬೇಕು. ''ನಿಮಗೆ ಇಷ್ಟ ಇದ್ದರೆ ಇರಿ ಇಲ್ಲದಿದ್ದರೆ ಮುಂದಿನ ಸ್ಟಾಪ್‌ನಲ್ಲಿ ಇಳಿದು ಹೋಗಿರಿ.'' ಇದು ನಿಮ್ಮ ಕಂಡಕ್ಟರ್ ಹೇಳುವಂತಹ ಮಾತು. ಆ ಮಹಿಳೆ ಹೇಳಿದರು, ನಾನು ಅದಕ್ಕೋಸ್ಕರ ಬಂದಿಲ್ಲ, ನಾನು ಬಸ್‌ನಲ್ಲಿ ಬಂದೇ ಇದ್ದೇನೆ. ಟಿಕೆಟ್ ಕೊಡಲೇ ಬೇಕು ಎಂದು ಹಠ ಹಿಡಿದರು, ಬಸ್‌ನಲ್ಲಿ ಕುಳಿತುಕೊಂಡರು. ಇಳಿಯುವಾಗ ಮತ್ತೆ ಆ ಕಂಡಕ್ಟರ್ ಹೇಳಿದಂತಹ ಮಾತು. ''ಏನ್ರೀ ನೀವು ಬಿಟಿಎಸ್ ಪಬ್ಲಿಕ್ ಸರ್ವೀಸ್ ಎಂದು ಇಲ್ಲಿ ಎಲ್ಲಾ ರೂಲ್ಸ್ ಅಂಡ್ ರೆಗ್ಯುಲೇಷನ್ಸ್ ಮಾಡುವುದಕ್ಕೆ ಹೋಗಬೇಡಿ. ಇಷ್ಟ ಇದ್ದರೆ ಇನ್ನು ಮೇಲೆ ಈ ಬಸ್‌ನಲ್ಲಿ ಬನ್ನಿ ಇಲ್ಲದಿದ್ದರೆ ಬರಬೇಡಿ'' ಎಂದು ಅದನ್ನು ನಾನು ಏತಕ್ಕೆ ಹೇಳುತ್ತಿದ್ದೇನೆ ಅಂದರೆ ಈ ಬಸ್‌ನಲ್ಲಿ ಹೋಗುತ್ತಿರತಕ್ಕ ಕಂಡಕ್ಟರ್‌ಗಳು, ಬಸ್‌ನಲ್ಲಿರತಕ್ಕ ಡ್ರೈವರ್‌ಗಳು, ಮಹಿಳೆಯರು ಬಸ್‌ನಲ್ಲಿ ಪ್ರಯಾಣ ಮಾಡತಕ್ಕ ಸಂದರ್ಭದಲ್ಲಿ ಮಹಿಳೆಯರಿಗೆ ಏನು ಸೀಟುಗಳನ್ನು ರಿಸರ್ವ್ ಮಾಡಿದ್ದೀರಿ, ಅದನ್ನು ಸೀಟುಗಳು ಇದ್ದರೂ ಅವರಿಗೆ ಕೊಡುವುದಿಲ್ಲ, ಅವರು ಕೇಳಬೇಕು. ಹೆಣ್ಣುಮಕ್ಕಳು ಬಸ್ ಹೋಗುವಾಗ ನಿಂತುಕೊಂಡರೆ ಅವರು ವಾಲಾಡಬೇಕು. ಬಸ್ ಅದಕ್ಕೆ ತಕ್ಕಂತೆ ಡ್ರೈವರ್‌ಗಳು. ಹೆಚ್ಚು ಜನ ಮಹಿಳೆಯರು ನಿಂತುಕೊಂಡರು ಟ್ರಾವೆಲ್ ಮಾಡುವಾಗ ಮಹನೀಯರು 'ತುಂಬಿರತಕ್ಕ ಸಂದರ್ಭದಲ್ಲಿ ಬಸ್ ಡ್ರೈವರ್‌ಗಳು ಸಡನ್ ಆಗಿ ಬ್ರೇಕ್ ಹಾಕುವುದು. ಹೆಣ್ಣುಮಕ್ಕಳು ಬೀಳುವುದನ್ನು ನೋಡುವುದನ್ನು ಸುತ್ತ ಮುತ್ತಲೂ ಇರತಕ್ಕ ಪ್ರಯಾಣಿಕರು ನೋಡಿ ನಕ್ಕು ಹಾಸ್ಯ ಮಾಡತಕ್ಕದ್ದು. ಇದು ನಡೆಯುತ್ತಿರತಕ್ಕ ವಿಷಯ. ಹೆಣ್ಣು ಮಕ್ಕಳು ಬಸ್‌ನಲ್ಲಿ ಪ್ರಯಾಣ ಮಾಡಬೇಕು ಎಂದು ನಿಜವಾಗಿಯೂ ನಿಮಗೆ ಕಳಕಳಿ ಇದ್ದರೆ ನೀವು 30 ಪರ್ಸೆಂಟ್ ರಿಸರ್ವೇಷನ್ ಎಲ್ಲಾ ಕಡೆ ಇಡುತ್ತೀರಿ. ಬಸ್‌ನಲ್ಲಿ ಏಕೆ ಇಡುವುದಿಲ್ಲ?

(ಗೊಂದಲ)

ತಮ್ಮಂತಹ ಪ್ರಯಾಣಿಕರು ಬಸ್‌ನಲ್ಲಿ ಎಲ್ಲಿಯವರೆಗೆ ಇರುತ್ತಾರೆ ಅಲ್ಲಿಯತನಕ ಹೀಗೆ.

(ಗೊಂದಲ)

ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ:- .....ಮಹಿಳೆಯರನ್ನೇ ನೇಮಿಸಿದರೆ ಸಮಸ್ಯೆ ಬಗೆಹರಿಯುತ್ತದೆ.

ಶ್ರೀಮತಿ ಪ್ರಮೀಳಾ ನೇಸರ್ಗಿ:- ಇದನ್ನು ನಾನು ಒಪ್ಪುತ್ತೇನೆ. ಮೊನ್ನೆ ಚಾಲಕರ ಹುದ್ದೆಗೆಂದು ಅರ್ಜಿಗಳನ್ನು ಕರೆದಿದ್ದಾರೆ. ಆದರೆ, ಚಾಲಕರ ಹುದ್ದೆಗೆ ಮಹಿಳೆಯರನ್ನು ನೇಮಿಸುವುದಿಲ್ಲವೆಂದು ಹೇಳುತ್ತಿದ್ದಾರೆ. ಇವೊತ್ತು ಮಹಿಳೆಯರಿಗೆ ಎಲ್ಲಾ ರಂಗಗಳಲ್ಲೂ ಶೇಕಡ 30ರಷ್ಟು ಸ್ಥಾನಗಳನ್ನು ಮೀಸಲಾಗಿಡುವುದೆಂದು ಘೋಷಿಸಿದಾಗ ಬಿ.ಟಿ.ಎಸ್ ಮತ್ತು ಕೆ.ಎಸ್.ಆರ್.ಟಿ.ಸಿ ಯಲ್ಲಿ ಚಾಲಕರ ಹುದ್ದೆಗಳಲ್ಲೂ ಅವರಿಗೆ ಶೇಕಡ 30ರಷ್ಟು ಮೀಸಲಾತಿ ಕಲ್ಪಿಸಿಕೊಡಬೇಕು. ನಾನು ಸ್ವಿಟ್ಜರ್‌ಲೆಂಡ್ ಮತ್ತು ರೋಮ್ ದೇಶಗಳಿಗೆ ಹೋಗಿ ಅಲ್ಲಿನ ಬಸ್ಸುಗಳಲ್ಲಿ ಪ್ರಯಾಣ ಮಾಡಿ ಬಂದಿದ್ದೇನೆ. ಅಲ್ಲಿನ ಪ್ರತಿಯೊಂದು ಪ್ರಯಾಣಿಕರ ಬಸ್ಸುಗಳಲ್ಲಿ ಮಹಿಳೆಯರೇ ಚಾಲಕರಾಗಿದ್ದು, ಅವರು ಎಷ್ಟು ಚೆನ್ನಾಗಿ ಬಸ್ಸನ್ನು ಚಾಲನೆ ಮಾಡುತ್ತಾರೆಂದರೆ ಅಲ್ಲಿ ಅಪಘಾತಗಳಾಗುವುದು ಕಡಿಮೆ.

SRI H.SHIVAPPA:- According to Article 14 of the Constitution all are equal before law. I think the hon'ble Member Smt.Pramila must be knowing it.

ಶ್ರೀಮತಿ ಪ್ರಮೀಳಾ ನೇಸರ್ಗಿ:- ನೀವು ಬಸ್ಸಿನಲ್ಲಿ ಎಲ್ಲಿ ಪ್ರಯಾಣಿಸುತ್ತೀರಿ? ಹರಿಹರದಿಂದ ಇಲ್ಲಿಗೆ ಬರೀ Benzನಲ್ಲೇ ತಿರುಗಿಕೊಂಡು ಓಡಾಡುತ್ತೀರಿ. ನಿಮಗೆ ಬಸ್ಸು ಪ್ರಯಾಣಿಕರ ಕಷ್ಟವೇನು ಗೊತ್ತಿದೆ? ನಿಮಗೆ ಅವರ ಕಷ್ಟ ಗೊತ್ತಾಗುವುದಕ್ಕೆ ಸಾಧ್ಯವಿಲ್ಲ. ಬಸ್ಸಿನಲ್ಲಿ ಅಡ್ಡಾಡಿದ್ದರೆ ಕಷ್ಟವೇನೆಂದು ಗೊತ್ತಾಗುತ್ತಿತ್ತು. ಮಾನ್ಯ ಅಧ್ಯಕ್ಷರೆ, ಸಾರಿಗೆ ಸಂಸ್ಥೆಯಲ್ಲಿ ಬಸ್ಸಿನ ನಿರ್ವಾಹಕ ಮತ್ತು ಚಾಲಕರ ಹುದ್ದೆಗಳಲ್ಲಿ ಮಹಿಳೆಯರಿಗೆಂದು ಶೇಕಡ 30ರಷ್ಟು ಸ್ಥಾನಗಳನ್ನು ಮೀಸಲಾಗಿಡಬೇಕು.

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಎಸ್.ಆರ್.ಲಕ್ಷ್ಮಯ್ಯನವರು ಮಾತನಾಡಿದ್ದು ಕೇಳಿಸಲಿಲ್ಲ)

ಶ್ರೀಮತಿ ಪ್ರಮೀಳಾ ನೇಸರ್ಗಿ:- ಲಕ್ಷ್ಮಯ್ಯನವರೇಕೆ ಇದರ ಬಗ್ಗೆ.

ಅಧ್ಯಕ್ಷರು:- ಅವರು ಹೆಣ್ಣುಮಕ್ಕಳ ಪರವಾಗಿದ್ದಾರೆ.

ಶ್ರೀ ಎಸ್.ಆರ್.ಲಕ್ಷ್ಮಯ್ಯ:- ನೀವು ದಯವಿಟ್ಟು ನನ್ನ ಕಡೆ ನೋಡಬೇಡಿ, ಅತ್ತ ಕಡೆ ನೋಡಿ ಮಾತನಾಡಿ.

ಶ್ರೀಮತಿ ಪ್ರಮೀಳಾ ನೇಸರ್ಗಿ:- ಆಯಿತು. ನಮ್ಮನ್ಯಾಕೆ ನೋಡುವುದಕ್ಕೆ ಹೋಗುತ್ತೀರಿ? ತಮ್ಮ ಲಕ್ಷ್ಯ ಎಲ್ಲಿದೆಯೆಂದು ನನಗೆ ಗೊತ್ತಾಗುತ್ತಿಲ್ಲ. ಬಿ.ಟಿ.ಎಸ್. ಮತ್ತು ಕೆ.ಎಸ್.ಆರ್.ಟಿ.ಸಿ ಬಸ್ಸಿನಲ್ಲಿ ಮಹಿಳೆಯರಿಗೆಂದು ಶೇಕಡ 30ರಷ್ಟು ಸ್ಥಾನಗಳನ್ನು

ಮೀಸಲಿಟ್ಟು ನಿಯಮಗಳನ್ನು ಮಾಡಿದರೂ ಕೂಡ ಅದನ್ನು ಸರಿಯಾಗಿ ಅನುಷ್ಠಾನಗೊಳಿಸುವಂಥ ಪರಿಸ್ಥಿತಿ ಬರಬೇಕು. ಪುರುಷರು ಮಹಿಳೆಯರಿಗೆಂದು ಮೀಸಲಿಟ್ಟ ಜಾಗದಲ್ಲಿ ಕುಳಿತಿರುವಾಗ ಮಹಿಳೆಯರು ಬಂದು ಜಾಗ ಬಿಟ್ಟುಕೊಡಲು ಹೇಳಿದಾಗ ಅವರು ಜಾಗ ಬಿಟ್ಟುಕೊಡದಿದ್ದಾಗ ನಿರ್ವಾಹಕರು ಅವರನ್ನು ತಕ್ಷಣ ಬಸ್ಸಿನಿಂದ ಇಳಿಯಬೇಕೆಂದು ಸಂಬಂಧಿಸಿದ ಪುರುಷ ಪ್ರಯಾಣಿಕರಿಗೆ ಹೇಳಬೇಕೆ ಹೊರತು ಮಹಿಳೆಯರು ಜಾಗ ಬಿಟ್ಟುಕೊಡಲು ಪುರುಷರಿಗೆ ಹೇಳಿದಾಗ ಅವರು ಜಾಗ ಬಿಟ್ಟುಕೊಡುವುದಕ್ಕಾಗುವುದಿಲ್ಲವೆಂದು ಹೇಳಿಕೊಳ್ಳುವಂಥ ಪರಿಸ್ಥಿತಿ ನಮಗೆ ಬರಬಾರದು. ಆದುದರಿಂದ, ಬಸ್ಸಿನಲ್ಲಿ ಪ್ರಯಾಣ ಮಾಡುವಾಗ ಮಹಿಳೆಯರ ಜೊತೆ ಹೇಗೆ, ಯಾವ ರೀತಿ ನಡೆದುಕೊಳ್ಳಬೇಕೆಂಬ ಬಗ್ಗೆ ನಿರ್ವಾಹಕರಿಗೆ ಮತ್ತು ಚಾಲಕರಿಗೆ ತರಬೇತಿ ನೀಡುತ್ತೀರೋ? ಎರಡನೆಯದಾಗಿ, ಬಸ್ಸಿನಲ್ಲಿ ಪುರುಷರು ಬಂದು ಕುಳಿತುಕೊಳ್ಳತಕ್ಕದ್ದಲ್ಲವೆಂಬ ಬಗ್ಗೆ ಕಾನೂನು ತರುತ್ತೀರೋ? ಈ ಬಗ್ಗೆ ಮಾನ್ಯ ಸಚಿವರು ತಿಳಿಸಬೇಕು.

+ಶ್ರೀಮತಿ ಬಿ.ಟಿ.ಲಲಿತಾನಾಯಕ್:- ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಸದಸ್ಯರಾದ ಶ್ರೀಮತಿ ಪ್ರಮೀಳಾ ನೇಸರ್ಗಿಯವರು ಹೇಳಿರುವಂತೆ ಇದರ ಜೊತೆ ಇನ್ನೂ ಹಲವಾರು ತೊಂದರೆಗಳಿವೆ. ನಾನು ಪ್ರಮುಖವಾದ ಎರಡು ಅಂಶಗಳನ್ನು ಹೇಳಬಯಸುತ್ತೇನೆ. ಬಸ್ಸಿನಲ್ಲಿ ಮಹಿಳೆಯರಿಗಾಗಿ ಮೀಸಲಿರಿಸಿರುವ ಜಾಗದಲ್ಲಿ ಪುರುಷರು ಮೊದಲೇ ಬಂದು ಕುಳಿತುಕೊಂಡಿದ್ದು, ಮಹಿಳೆಯರು ಬಂದ ನಂತರ ಜಾಗ ಬಿಟ್ಟುಕೊಡಿ ಎಂದರೆ 'ನಾವು ಖಾಲಿ ಇದ್ದ ಜಾಗದಲ್ಲಿ ಕುಳಿತುಕೊಂಡಿದ್ದೇವೆ' ಎಂದು ಪುರುಷರು ಹೇಳುತ್ತಾರೆ. 'ಅವರನ್ನು ಆ ಜಾಗದಿಂದ ಏಳಿಸಿ' ಎಂದು ನಿರ್ವಾಹಕರು ಮತ್ತು ಚಾಲಕರಿಗೆ ಹೇಳಿದರೆ ಅವರು ಅದಕ್ಕೂ ನಮಗೂ ಸಂಬಂಧವಿಲ್ಲವೆಂದು, ಒಂದು ವೇಳೆ ಸಂಬಂಧವಿದ್ದೂ ಪುರುಷ ಪ್ರಯಾಣಿಕರನ್ನು ಮಹಿಳೆಯರ ಜಾಗವನ್ನು ಬಿಟ್ಟುಕೊಡಬೇಕೆಂದು ಹೇಳಿದರೂ ಅವರ ಮಾತನ್ನು ಕೇಳುವುದಿಲ್ಲ. ಕೊನೆಗೆ, ನಿಯಮದ ಪ್ರಕಾರ ಬಸ್ಸನ್ನು ಪೋಲೀಸ್ ಠಾಣೆಯತ್ತ ತೆಗೆದುಕೊಂಡು ಹೋಗಿ ಸಂಬಂಧಪಟ್ಟ ಪುರುಷ ಪ್ರಯಾಣಿಕರ ಮೇಲೆ ದೂರು ಸಲ್ಲಿಸಬಹುದಾಗಿರುವುದರಿಂದ, ಪೋಲೀಸ್ ಠಾಣೆಯತ್ತ ಬಸ್ಸನ್ನು ತೆಗೆದುಕೊಂಡು ಹೋಗಿ ಎಂದಾಗ ಸಂಬಂಧಿಸಿದ ಮಹಿಳೆಯನ್ನು ಉದ್ದೇಶಿಸಿ ಇತರೇ ಸಹ ಪ್ರಯಾಣಿಕರು 'ನಮಗೆ ಕಛೇರಿಗೆ ವಿಳಂಬವಾಗುತ್ತದೆ, ಸುಮ್ಮನೇಕೆ ಕಿರಿಕಿರಿ ಮಾಡುತ್ತಿದ್ದೀರಿ, ಪೋಲೀಸ್ ಠಾಣೆಗೆ ಹೋಗುವುದು ಬೇಡವೆಂದು ಚಾಲಕರಿಗೆ ಹೇಳುತ್ತಾರೆ, ಮತ್ತು ಸಂಬಂಧಿತ ಮಹಿಳೆಯನ್ನು ಬಯ್ಯುವುದಕ್ಕೆ ಶುರು ಮಾಡುತ್ತಾರೆ. ಆದರೆ, ಚಾಲಕ ಜನರ ಎರಡೂ ಕಡೆಯ ಅಭಿಪ್ರಾಯಗಳತ್ತ ವಾಲುತ್ತಾನೆ. ಇಂತಹ ತೊಂದರೆಯಿರುವುದರಿಂದ ಇದರ ಬಗ್ಗೆ ಮಾನ್ಯ ಮಂತ್ರಿಗಳು ಕೈಗೊಳ್ಳಬೇಕಾಗಿರುವ ಕ್ರಮವೇನೆಂದರೆ, ಒಂದು ವೇಳೆ ಮಹಿಳೆಯರಿಗೆ ಮೀಸಲಿಟ್ಟ ಜಾಗದಲ್ಲಿ ಪುರುಷರು ಕುಳಿತಿದ್ದರೆ ಸ್ಥಳದಲ್ಲಿಯೇ ನೂರು ರೂಪಾಯಿಗಳ ದಂಡ ವಿಧಿಸಲಾಗುವುದೆಂದು ಬಸ್ಸಿನಲ್ಲಿಯೇ ಬರೆದು ಬಿಡಬೇಕು. ಬರಹ ಹೇಗಿರಬೇಕೆಂದರೆ,

ಅಳಿಸುವುದಕ್ಕಾಗಬಾರದು. ಆ ತರಹ ಮಾಡಿದರೆ ಜನರಿಗೆ ಕಾನೂನು ಇದೆಯೆಂದು ಗೊತ್ತಾಗಿ ಹೆದರಿ ಸರಿಯಾಗಿ ನಡೆದುಕೊಳ್ಳುತ್ತಾರೆ. ಕಾನೂನು ಇದೆಯೆಂದು ನಾವು ಬರೀ ಬಾಯಿ ಮಾತಿನಲ್ಲಿ ಎಷ್ಟು ಹೇಳಿದರೂ ಕೂಡ ಕಾನೂನು ಪಾಲನೆಯಾಗುವುದಿಲ್ಲವಾದ್ದರಿಂದ ಕಾನೂನನ್ನು ಬಸ್ಸಿನ ಮೇಲೆ ಸರಿಯಾದ ರೀತಿಯಲ್ಲಿ ಬರೆಸಿ ಹಾಕಿದರೆ ಮಹಿಳೆಯರಿಗೆ ಅನುಕೂಲವುಂಟಾಗುತ್ತದೆ.

ಅಧ್ಯಕ್ಷರು:- ಆ ರೀತಿ ಬಸ್ಸಿನ ಮೇಲೂ ಬರೆದು, ರಸೀತಿ ಕೊಡುವಂತೆ ಕೂಡ ಬರೆದು ಬಿಡಬೇಕು.

ಶ್ರೀ ಎಸ್.ರಾಜೇಂದ್ರನ್:- ಮಾನ್ಯ ಅಧ್ಯಕ್ಷರೆ, ನನಗೊಂದು ಸಂಶಯ ಬಂದಿದೆ. ಏನೆಂದರೆ, ಮಹಿಳೆಯರಿಗಾಗಿ ಬಸ್ಸಿನಲ್ಲಿ ಮೀಸಲಿಟ್ಟ ಜಾಗದಲ್ಲಿ ಪುರುಷರು ಕುಳಿತಿದ್ದರೆ ಸ್ಥಳದಲ್ಲೇ ನೂರು ರೂಪಾಯಿಗಳ ದಂಡ ವಿಧಿಸಬೇಕೆಂದು ಮಾನ್ಯ ಸದಸ್ಯರು ಸಲಹೆ ಮಾಡಿದರು. ಒಂದು ವೇಳೆ ಪುರುಷ ಪ್ರಯಾಣಿಕ ನೂರು ರೂಪಾಯಿಗಳನ್ನು ತೆತ್ತು ಅದೇ ಜಾಗದಲ್ಲಿ ಕುಳಿತುಕೊಳ್ಳುತ್ತೇನೆಂದರೆ ಏನು ಮಾಡುತ್ತೀರಿ ಆಗ?

ಶ್ರೀಮತಿ ಬಿ.ಟಿ.ಲಲಿತಾನಾಯಕ್:- ಒಂದು ವೇಳೆ ನೂರು ರೂಪಾಯಿಗಳ ದಂಡ ಕೊಟ್ಟು ಸಹ ಅಲ್ಲಿಯೇ ಕುಳಿತುಕೊಳ್ಳುವುದಾಗಿ ಪುರುಷ ಪ್ರಯಾಣಿಕ ಹೇಳಿದರೆ ಅದು ಭಂಡತನವಾಗುತ್ತದೆ, ಮತ್ತೆ ಆತನಿಗೆ ನೂರು ರೂಪಾಯಿಗಳನ್ನು ವಿಧಿಸಬೇಕಾಗುತ್ತದೆ.

ಅಧ್ಯಕ್ಷರು:- ಈಗ ಬಸ್ಸಿನಲ್ಲಿ ಮಹಿಳೆಯರಿಗೆ ಕುಳಿತುಕೊಳ್ಳಲು ಅವಕಾಶ ಕೊಡುತ್ತೀರೋ? ಬಿಡುತ್ತೀರೋ? ಅದು ಬೇರೆ ಪ್ರಶ್ನೆ. ಆದರೆ, ಕೋಲಾರ ಜಿಲ್ಲೆಯವರು ಇಷ್ಟು ಮಾತ್ರ ಕೇಳಿರುವುದಕ್ಕೆ ನನಗೆ ಸಂತೋಷವಾಗಿದೆ.

SMT.PRAMILA NESARGI:- It is an offence, a continuing offecne ಆಗುತ್ತದೆ, ಪುರುಷ ಪ್ರಯಾಣಿಕರು ಮಹಿಳೆಯರ ಜಾಗದಲ್ಲಿ ಎಷ್ಟು ಹೊತ್ತು ಕುಳಿತುಕೊಂಡಿರುತ್ತಾರೋ ಅಷ್ಟು ಸಾರಿ ನೂರು ರೂಪಾಯಿಗಳ ದಂಡ ವಿರುತ್ತಲೇ ಹೋಗುತ್ತದೆ.

ಶ್ರೀ ಎಸ್.ರಾಜೇಂದ್ರನ್:- ಅಧ್ಯಕ್ಷರೆ, ನಾನು ನಿಜವಾಗಿಯೂ ಹೇಳುವುದಾದರೆ, ಬಸ್ಸಿನಲ್ಲಿ ಒಂದು ಸುಂದರವಾದ ಹೆಣ್ಣಿನ ಪಕ್ಕದಲ್ಲಿ ಕುಳಿತುಕೊಂಡಾಗ, ಮಹಿಳೆಯರ ಜಾಗದಲ್ಲಿ ಕುಳಿತುಕೊಂಡಿರುವುದಕ್ಕೆ ಎಷ್ಟು ನೂರು ರೂಪಾಯಿಗಳ ದಂಡ ವಿಧಿಸುತ್ತಾರೋ ಅಷ್ಟನ್ನೂ ಖಂಡಿತವಾಗಿಯೂ ಕೊಟ್ಟು ನಾನು ಕುಳಿತುಕೊಳ್ಳುತ್ತೇನೆ.

(ನಗು)

ಮಾನ್ಯ ಸದಸ್ಯರು:- ಕೋಲಾರದವರೆಲ್ಲ ಹಾಗೆಯೇ ಎಂದು ಕಾಣುತ್ತದೆ.

ಶ್ರೀ ವಾಟಾಳ್ ನಾಗರಾಜ್:- ಬಸ್ಸಿನಲ್ಲಿ ಸುಂದರವಾದ ಹೆಣ್ಣುಮಗಳ ಪಕ್ಕದಲ್ಲಿ ಕುಳಿತುಕೊಂಡಾಗ ಎಷ್ಟು ನೂರು ರೂಪಾಯಿಗಳ ದಂಡ ವಿಧಿಸುತ್ತಾರೋ ಅಷ್ಟನ್ನೂ

ತೆತ್ತು ಕುಳಿತುಕೊಂಡು ಹೋಗುತ್ತೇವೆಂದರೆ ನಿಮ್ಮ ಕೋಲಾರ ಜಿಲ್ಲೆಯವರ ದೌರ್ಭಾಗ್ಯವಿದು.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ:- ಕೋಲಾರ ಜಿಲ್ಲೆಯವರದಲ್ಲ, 'ಕೋಲಾರ' ಎಂದರೆ ತಮಿಳಿನಲ್ಲಿ ಒಂದು ಅರ್ಥವಿದೆ.

ಶ್ರೀ ವಾಟಾಳ್ ನಾಗರಾಜ್:- ಅಧ್ಯಕ್ಷರು, ನಾನು ತಮ್ಮನ್ನು ಬಹಳ ದಿವಸಗಳಿಂದ ನೋಡಿರುವುದರಿಂದ, ತಮಗೆ ಇಂತಹ ಅಭ್ಯಾಸಗಳಿಲ್ಲ, ಮತ್ತು ಕೋಲಾರ ಜಿಲ್ಲೆಯ ಅನೇಕ ಜನರನ್ನು ನೋಡಿದ್ದೇನೆ, ಅವರುಗಳಿಗೆ ಇಂತಹ ಅಭ್ಯಾಸವಿಲ್ಲ. ನೂರು ರೂಪಾಯಿಗಳ ದಂಡ ಕೊಟ್ಟು ಬಸ್ಸಿನಲ್ಲಿ ಮಹಿಳೆಯರ ಪಕ್ಕದಲ್ಲಿ ದಿನವೆಲ್ಲಾ ಕುಳಿತುಕೊಂಡು ಪ್ರಯಾಣಿಸುತ್ತೇನೆಂದು ಎಸ್.ರಾಚೇಂದ್ರನ್ - ಹೇಳಿದರೆ, ನಾವು ಇವರನ್ನು ಎಲ್ಲಿಗೆ ಕಳುಹಿಸಬೇಕು? ಈ ತರಹ ಆದರೆ ಕಷ್ಟ, ಇದೇ ರೀತಿ ಎಲ್ಲಾ ಶಾಸಕರುಗಳು ಹೊರಟುಬಿಟ್ಟರೆ ಗತಿ ಏನು? ತಮ್ಮಲ್ಲಿ ಪ್ರಶ್ನೆ ಕೇಳುವುದೇನೆಂದರೆ, ಮಾನ್ಯ ಮಹಿಳಾ ಸದಸ್ಯರಾದ ಪ್ರಮೀಳಾ ನೇಸರ್ಗಿಯವರಿಗೆ ಈ ವಿಚಾರದಲ್ಲಿ ನಾನು ಬೆಂಬಲ ಕೊಡುತ್ತಿದ್ದೇನೆ. ಪ್ರಮೀಳಾ ನೇಸರ್ಗಿ ಅವರು ಹೆದರಬೇಕಾಗಿಲ್ಲ, ಧೈರ್ಯವಾಗಿರಿ. ನೀವು ಇನ್ನೊಂದು ಸಾರಿ ಬಸ್ಸಿನಲ್ಲಿ ಪ್ರಯಾಣಕ್ಕೆ ಹೋದಂಥ ಸಂದರ್ಭದಲ್ಲಿ ಒಂದು ವೇಳೆ ಮಹಿಳೆಯರ ಜಾಗದಲ್ಲಿ ಪುರುಷ ಕುಳಿತಿದ್ದರೆ, ಅಲ್ಲಿಂದ ಸ್ಥಳ ಬಿಟ್ಟು ಏಳಲಿಲ್ಲವೆಂದರೆ ಆತನಿಗೆ ನೀವು ಎರಡೇಟು ಕೊಟ್ಟರೂ ಚಿಂತೆಯಿಲ್ಲ. ಅದು ಮಹಿಳೆಯರಿಗೆಂದೇ ಮೀಸಲಾಗಿಟ್ಟ ಜಾಗವೆಂದು ತೀರ್ಮಾನವಾಗಲಿ.

ಅಧ್ಯಕ್ಷರು:- ಇದು ಇವರ ವಿಧಾನ. ನೀವೂ ಕೈ ಎತ್ತಿ, ನಿಮ್ಮ ಮೇಲೆ ಅವರೂ ಕೈ ಎತ್ತಿದರೆ ಆಗ ಇವರು ಅಪೇಕ್ಷೆ ಪಟ್ಟಿದ್ದು ಪೂರ್ಣವಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್:- ಈ ಸರ್ಕಾರಕ್ಕೆ ಹೆಣ್ಣುಮಕ್ಕಳ ಬಗ್ಗೆ ಅಪಾರವಾದ ಕಳಕಳಿ ಇದೆ. ಎಲ್ಲಾ ರಂಗಗಳಲ್ಲೂ ಮಹಿಳೆಯರಿಗೆ ಕೇಂದ್ರ ಮತ್ತು ರಾಜ್ಯ ಸ್ಥಾನಗಳನ್ನು ಮೀಸಲಾಗಿಡುವುದೆಂದು ಈಗ್ಗಾಗಲೇ ಸರ್ಕಾರ ಘೋಷಿಸಿದೆ. ಆದರೆ, ಇದು ಕೃತಿಯಲ್ಲಿ ನಡೆದಿಲ್ಲ. ಈಗ ಆ ಕುರಿತ ಮಸೂದೆಯನ್ನು ಲೋಕಸಭೆಯಲ್ಲಿ ಮಂಡಿಸಲಾಗುತ್ತದೆಂದು ಇವರು ಹೇಳಿಕೊಂಡಿದ್ದಾರೆ. ಆದರೂ ಇನ್ನೂ ಕೃತಿಯಲ್ಲಿ ನಡೆದಿಲ್ಲ. ನಾನು ಮಾನ್ಯ ಮುಖ್ಯಮಂತ್ರಿಗಳಾದ ಜೆ.ಹೆಚ್.ಪಟೇಲರನ್ನು ಮೊದಲಿನಿಂದಲೂ ನೋಡಿದ್ದೇನೆ. ಅವರಿಗೆ ಹೆಣ್ಣುಮಕ್ಕಳ ಬಗ್ಗೆ ಅಪಾರವಾದ ಗೌರವ, ಪ್ರೀತಿ, ವಿಶ್ವಾಸ ಎಲ್ಲಾ ಇದೆ. ಇದರ ಬಗ್ಗೆ ನಾನು ಅವರನ್ನು ಕೇಳುತ್ತೇನೆ. ಅದಕ್ಕೆ ಅವರು ನೇರವಾಗಿ ಉತ್ತರ ಕೊಡಬೇಕು. ಮಾನ್ಯ ಸದಸ್ಯರು ಬಹಳ ಪ್ರಮುಖವಾದ ಪ್ರಶ್ನೆಗಳನ್ನು ಪ್ರಸ್ತಾಪಿಸಿರುವುದರಿಂದ, ಬಸ್ಸುಗಳಲ್ಲಿ ಮಹಿಳೆಯರಿಗೆ ಜಾಗಗಳನ್ನು ಮೀಸಲಿಡುವ ಬಗ್ಗೆ ಉತ್ತರ ಕೊಡಬೇಕು. ಮಾನ್ಯ ಮುಖ್ಯಮಂತ್ರಿಯವರ ವಿಚಾರಗಳನ್ನು ಗಮನಿಸಿದ್ದೇವೆ. ಮಹಿಳೆಯರಿಗೆ ಅನ್ಯಾಯವಾಗುವಾಗ ಅವರು ಪ್ರತಿಭಟನೆ ಮಾಡಿದ್ದು, ಅವರಿಗಾಗಿರುವ ಅನ್ಯಾಯವನ್ನು ಸರಿಪಡಿಸಬೇಕೆಂಬುದೇ ಅವರ ಸರ್ಕಾರದ ನಿರ್ಧಾರವಾಗಿದೆ. ಆದುದರಿಂದ, ಇದರ

ಬಗ್ಗೆ ಅವರೇ ಉತ್ತರ ಕೊಡಬೇಕು.

ಶ್ರೀ ಜೆ.ಹೆಚ್.ಪಟೇಲ್:- ಅಧ್ಯಕ್ಷರೆ, ನಮ್ಮ ದೇಶದ ಸಂಸ್ಕೃತಿಯ ಹಿನ್ನೆಲೆಯಲ್ಲಿ ನಾವು ಮಹಿಳೆಯರ ಬಗ್ಗೆ ಅಂಥ ತೀರಾ ಭೇದವನ್ನು ಕಾಣಬಾರದು. ಆದರೆ ಬದಲಾವಣೆಯಾಗುತ್ತಿರುವ ಈ ಸಂದರ್ಭದಲ್ಲಿ ಕಿಡಿಗೇಡಿತನ, ಹಿಂಸೆ, ಕುಚೇಷ್ಟೆ, ತುಂಟಾಟ ಇವುಗಳ ಹಿನ್ನೆಲೆಯಲ್ಲಿ ತಾವು ಹೇಳಿರತಕ್ಕ ಮಾತನ್ನು ಒಪ್ಪುತ್ತೇನೆ. ಮಹಿಳೆಯರಿಗೆ ರಕ್ಷಣೆ ಬೇಕು. ಅಷ್ಟು ಸೀಟು ಖಾಲಿ ಇದ್ದರೂ ಚಿಂತೆ ಇಲ್ಲ ಮಹಿಳೆಯರಿಗೆ ಸೀಟನ್ನು ಮೀಸಲಾಗಿಡಬೇಕು. ಆದರೆ ಸಾಂಸ್ಕೃತಿಕವಾಗಿ ಬೆಳೆದಂಥ ದೇಶದಲ್ಲಿ ಆ ರೀತಿ ಯಾವುದೂ ವ್ಯವಸ್ಥೆ ಇಲ್ಲ. ಏಕೆಂದರೆ Self-restraint ಇರುತ್ತದೆ. ಆದರೆ ಸುಂದರವಾದ ಮಹಿಳೆಯರು ಬಸ್ಸಿನಲ್ಲಿ ಹೋಗುತ್ತಿರಬೇಕಾದರೆ ನೋಡಬೇಕೆಂದು ಆಸೆ ಇರುತ್ತದೆ. ಸೌಂದರ್ಯವನ್ನು ಯಾರು ಮೆಚ್ಚುವುದಿಲ್ಲ!

ಅಧ್ಯಕ್ಷರು:- ತಾವು ನನ್ನ ಕಡೆ ನೋಡಬೇಕು ಇಲ್ಲವೆ ವಿರೋಧ ಪಕ್ಷದವರ ಕಡೆ ನೋಡಬೇಕು. ವಾಟಾಳ್ ನಾಗರಾಜ್‌ರವರ ಕಡೆ ಏಕೆ ನೋಡುತ್ತಿದ್ದೀರಿ, ಅದರ ರಹಸ್ಯವೇನು.

ಶ್ರೀ ಜೆ.ಹೆಚ್.ಪಟೇಲ್:- ಅದು ಸರಿ, ಅವರಿಗಿಂತ ನೀವೇ ಸುಂದರವಾಗಿದ್ದೀರಿ.

(ನಗು)

ಶ್ರೀ ವಾಟಾಳ್ ನಾಗರಾಜ್:- ಬಹಳ ಆಶ್ಚರ್ಯವಾದ ವಿಚಾರವೇನೆಂದರೆ, ಮಾನ್ಯ ಮುಖ್ಯಮಂತ್ರಿಗಳು ನಿಮ್ಮನ್ನೇ ಸುಂದರವೆಂದು ಒಪ್ಪಿಕೊಂಡಿದ್ದಾರೆ, ಇನ್ನು ನಿಜವಾದ ಸುಂದರಿ ಎದುರಿಗೆ ಬಂದರೆ ಪರಿಸ್ಥಿತಿ ಏನು?

ಶ್ರೀ ಜೆ.ಹೆಚ್.ಪಟೇಲ್:- ಮಹಿಳೆಯರಿಗೆ ರಕ್ಷಣೆಯ ದೃಷ್ಟಿಯಿಂದ ಈ ರೀತಿಯಾದ ಕಟ್ಟುಪಾಡುಗಳು ಬೇಕಾಗುತ್ತದೆ. ಏಕೆಂದರೆ ಹುಡುಗರು ಕೆಲವು ಬಸ್ಸಿನಲ್ಲಿ ಕ್ಯೆಂಸ್ ಎಲ್ಲಾ ಮಾಡುತ್ತಾರೆ. ಆ ದೃಷ್ಟಿಯಿಂದ ಮಹಿಳೆಯರಿಗೆ ಸೀಟನ್ನು ಮೀಸಲಾಗಿಡಬೇಕಾಗುತ್ತದೆ. ಅದನ್ನು ಮಾಡುತ್ತೇವೆ, ಸಾರಿಗೆ ಸಚಿವರೂ ಸಹ ಅದರ ಬಗ್ಗೆ ಹೇಳಿದ್ದಾರೆ.

ಶ್ರೀ ಪಿ.ಜಿ.ಆರ್.ಸಿಂಧ್ಯ:- ಮಾನ್ಯ ಅಧ್ಯಕ್ಷರೆ, ಈ ವಿಷಯಕ್ಕೆ ಸಂಬಂಧಪಟ್ಟಂತೆ ಮಾನ್ಯ ಮುಖ್ಯಮಂತ್ರಿಯವರು ತಾತ್ವಿಕವಾದ ಹಿನ್ನೆಲೆಯಲ್ಲಿ ಉತ್ತರವನ್ನು ಕೊಟ್ಟಿದ್ದಾರೆ. ಆದರೆ ಒಂದೆರಡು ವಿಚಾರಗಳನ್ನು ಮಾನ್ಯ ಮಹಿಳಾ ಸದಸ್ಯರುಗಳ ಗಮನಕ್ಕೆ ತರಬಯಸುತ್ತೇನೆ. 1989ರ ಕೆ.ಎಂ.ಇ. ನಿಯಮ 94ರ ಉಪನಿಯಮದ ಪ್ರಕಾರ ಮಹಿಳೆಯರಿಗಾಗಿ ಬಸ್ಸಿನಲ್ಲಿ ಸೀಟನ್ನು ಕಾಯ್ದಿರಿಸತಕ್ಕದ್ದು ಮತ್ತು ಅವರಿಗೆ ಮೀಸಲಾಗಿಟ್ಟಿದ್ದ ಸೀಟಿನಲ್ಲಿ ಕುಳಿತವರಿಗೆ ಅಪರಾಧವೆಂದು ಕಾನೂನಿನಲ್ಲಿದೆ. ಇದರ ಬಗ್ಗೆ ಹೊಸದಾಗಿ ಕಾನೂನನ್ನು ಮಾಡತಕ್ಕ ಅವಶ್ಯಕತೆ ಇಲ್ಲ. ಶೇಖಡ 30ರಷ್ಟು ಸೀಟನ್ನು ಮಹಿಳೆಯರಿಗೆ ಮೀಸಲಾಗಿಡಬೇಕೆಂದು ಹೇಳಿದ್ದಾರೆ, ಅವಶ್ಯಕವಾಗಿ ತಿದ್ದುಪಡಿಯನ್ನು ಮಾಡಬೇಕಾಗಿದ್ದರೆ ಅದನ್ನು ಮಾಡಿಸುತ್ತೇನೆ. ಮತ್ತು ಯಾವ ಚಾಲಕರು ಮತ್ತು

ನಿರ್ವಾಹಕರ ನಡವಳಿಕೆಯ ಬಗ್ಗೆ ಅವರು ಹೇಳಿದ್ದಾರೆ ಅದರ ಬಗ್ಗೆ ಸೂಕ್ತವಾದ ಕ್ರಮ ತೆಗೆದುಕೊಳ್ಳುತ್ತೇನೆ. ರಿಫ್ರೆಷರ್ ಕೋರ್ಸ್ ಮಾಡಬೇಕೆಂದು ಹೇಳಿದ್ದಾರೆ. ಅದರ ಬಗ್ಗೆ ನಾವು ಈಗಾಗಲೇ ಕ್ರಮ ತೆಗೆದುಕೊಂಡಿದ್ದೇನೆ. ಮತ್ತು ಚಾಲಕರ ಮತ್ತು ನಿರ್ವಾಹಕರ ಹುದ್ದೆಗೆ ಮಹಿಳೆಯರಿಗೆ ಏಕೆ ಆದ್ಯತೆ ಕೊಡಬಾರದೆಂದು ಕೇಳಿದ್ದಾರೆ, ಹೆವೀ ವೆಹಿಕಲ್ ಡ್ರೈವಿಂಗ್ ಲೈಸೆನ್ಸ್ ಇರುವ ಮಹಿಳೆಯರು ಎಷ್ಟಿದ್ದಾರೋ ನನಗೆ ಗೊತ್ತಿಲ್ಲ. ಇಲ್ಲವೇ ಇಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಅದರ ಬಗ್ಗೆ ನಾನು ಪರಿಶೀಲನೆ ಮಾಡುತ್ತೇನೆ. ಆದರೆ ನಿರ್ವಾಹಕರ ಕೆಲಸ ಮಾಡಲು ಮಹಿಳೆಯರು ಮುಂದೆ ಬರುವುದಾಗಿದ್ದರೆ ಅದಕ್ಕೆ ಮೀಸಲಾತಿಯ ವ್ಯವಸ್ಥೆ ಮಾಡುತ್ತೇವೆ ಎಂದು ಭರವಸೆಯನ್ನು ಕೊಡುತ್ತೇನೆ. ತಾವೇನು ಚಾಲಕರು ಮತ್ತು ನಿರ್ವಾಹಕರ ನಡವಳಿಕೆಯ ಬಗ್ಗೆ ಹೇಳಿದ್ದೀರಿ ಅದನ್ನು ಮಾಡಿಲ್ಲವೆಂದು ಅವರುಗಳು ಹೇಳಲು ಸಾಧ್ಯವಿಲ್ಲ. ಆ ರೀತಿ ಮಾಡಿದ್ದರೆ ತಿಳುವಳಿಕೆ ಕೊಟ್ಟು ತಪ್ಪು ಮಾಡಿದವರಿಗೆ ಕಾನೂನಿನ ಪ್ರಕಾರ ಶಿಕ್ಷೆ ಕೊಡಲು ಏರ್ಪಾಡು ಮಾಡುತ್ತೇನೆ. ಬೆಂಗಳೂರಿನ ಸಾರಿಗೆ ವ್ಯವಸ್ಥೆಯಲ್ಲಿ ಈ ಸಮಸ್ಯೆ ಬಹಳ ಮುಖ್ಯವಾಗಿದೆ. ಹೊರಗಡೆ ಅಂಥ ತೀವ್ರವಾದ ಸಮಸ್ಯೆ ಇಲ್ಲ. ಆದ್ದರಿಂದ ಬೆಂಗಳೂರಿನಲ್ಲಿ ಮಹಿಳೆಯರಿಗೋಸ್ಕರವೇ ಕೆಲವು ಟ್ರಿಪ್ಪುಗಳನ್ನು ಓಡಿಸುತ್ತಿದ್ದಾರೆ. ಅದರ ಸಂಖ್ಯೆಯನ್ನು ಹೆಚ್ಚು ಮಾಡುವ ಬಗ್ಗೆ ವಿಚಾರ ಮಾಡುತ್ತೇನೆ.

ಶ್ರೀ ಸಿ.ಹೆಚ್.ವಿಜಯಶಂಕರ್:- ಮಾನ್ಯ ಅಧ್ಯಕ್ಷರೆ, ಇಲ್ಲಿರತಕ್ಕ ಎಷ್ಟು ಜನ ಸದಸ್ಯರು ಬಸ್ಸಿನಲ್ಲಿ ಓಡಾಡತಕ್ಕ ಪದ್ಧತಿಯನ್ನಿಟ್ಟುಕೊಂಡಿದ್ದಾರೋ ಗೊತ್ತಿಲ್ಲ. ನಾನಂತು ಬಸ್ಸಿನಲ್ಲಿ ಓಡಾಡುತ್ತಿದ್ದೇನೆ. ಬಸ್ಸಿನಲ್ಲಿನ ದಿನನಿತ್ಯದ ಸಮಸ್ಯೆಯೇನು ಎಂಬ ಬಗ್ಗೆ ಸ್ಪಷ್ಟವಾಗಿ ನಾನು ಹೇಳಬಲ್ಲೆ. ಬಸ್ಸು ಬಂದು ನಿಂತಂಥ ಸಮಯದಲ್ಲಿ ಪ್ರಯಾಣಿಕರ ನೂಕು ನುಗ್ಗಲು, ಒಬ್ಬರು ಬಸ್ಸಿನ ಒಳಗೆ ಹೋಗಿ ಬಟ್ಟೆಯನ್ನು ಹಾಕಿ ಮೂರು ಸೀಟಿಗೂ ಟವಲ್ ಹಾಕಿ ಈ ಸೀಟು ನನ್ನದು ಎಂದು ಹೇಳತಕ್ಕ ವಾತಾವರಣ, ಮಹಿಳೆಯರಿಗೆ ಮೀಸಲಾಗಿದ್ದ ಸೀಟಿನಲ್ಲಿ ಕುಳಿತು ದಬ್ಬಾಳಿಕೆ ಮಾಡುವ ವಾತಾವರಣ, ಇವೆಲ್ಲವೂ ನಮ್ಮ ಕಣ್ಣಿಗೆ ಸಹಜವಾಗಿ ಕಾಣುತ್ತದೆ.

ಮಹಿಳೆಯರು ಮಕ್ಕಳನ್ನು ಎತ್ತುಕೊಂಡು ನಿಂತಿದ್ದರೂ ಅವರಿಗೆ ಸೀಟನ್ನು ಬಿಡದಿರುವ ವಾತಾವರಣವನ್ನು ನಮ್ಮ ಸಮಾಜದಲ್ಲಿ ನಾವು ಕಾಣುತ್ತಿದ್ದೇವೆ. ನಮ್ಮ ಸಂಸ್ಕೃತಿ ಸಮಾಜ ಏನೇ ಹೇಳಬಹುದು, ನಾನು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುವುದೇನೆಂದರೆ, ಇಲ್ಲೇನು ಬಹಳ ಪ್ರಮುಖವಾದ ವಿಚಾರ ಚರ್ಚೆಯಾಗುತ್ತಿದೆ ಇದರ ಬಗ್ಗೆ ಸರ್ಕಾರ ಬಹಳ ಕಡ್ಡಾಯವಾದ ನಿಯಮವನ್ನು ತರಬೇಕು. ಬಸ್ಸಿನಲ್ಲಿ ಒಂದು ಕಡೆ ಎರಡು ಸೀಟು, ಮತ್ತೊಂದು ಕಡೆ ಮೂರು ಸೀಟು ಇರುತ್ತದೆ. ಆದ್ದರಿಂದ ಎರಡು ಸೀಟು ಇರತಕ್ಕ ಕಡೆಯಲ್ಲಿ ಸಂಪೂರ್ಣವಾಗಿ ಮಹಿಳೆಯರಿಗೆ ಮೀಸಲಾಗಿ ಇಡತಕ್ಕ ನಿಯಮವನ್ನು ಕಡ್ಡಾಯವಾಗಿ ಮಾಡಬೇಕು. ಇದರಿಂದ ಒಂದು ಕಡೆ ಗಂಡಸರು ಮತ್ತೊಂದು ಕಡೆ ಹೆಂಗಸರು ಕುಳಿತುಕೊಳ್ಳತಕ್ಕ ವ್ಯವಸ್ಥೆ ಆಗುತ್ತದೆ. ಇದರಿಂದ ಮಹಿಳೆಯರಿಗೆ ಸ್ವಲ್ಪ ನ್ಯಾಯವನ್ನು ಒದಗಿಸಲು ಸಾಧ್ಯವಾಗುತ್ತದೆ. ಸರ್ಕಾರ ಇದರ ಬಗ್ಗೆ ಚಿಂತನೆ

ಮಾಡಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ.

ವಿಷಯ:- ಶಿರಾ ತಾಲ್ಲೂಕಿನ ಹೊಂಬಳ್ಳಿ ಯೋಜನೆಯಡಿಯಲ್ಲಿ ಹಣ್ಣಿನ ಸಸಿಗಳ ವಿತರಣೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 12 (228)

ಶ್ರೀ ಟಿ.ಬಿ.ಜಯಚಂದ್ರ (ಕಳ್ಳಂಬೆಳ್ಳ):- ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಶಿರಾ ತಾಲ್ಲೂಕಿನಲ್ಲಿ ಹೊಂಬಳ್ಳಿ ಯೋಜನೆಯಡಿಯಲ್ಲಿ ಯಾವ ವಿಧವಾದ ಹಣ್ಣಿನ ಸಸಿಗಳನ್ನು ವಿತರಿಸಲಾಗಿದೆ?

ಆ) 1995-96ನೇ ಸಾಲಿನಲ್ಲಿ ಫಲಾನುಭವಿಗಳಿಗೆ ಕೂಲಿಯ ಹಣ ಮತ್ತು 1996-97ನೇ ಸಾಲಿನ ನಿರ್ವಹಣಾ ವೆಚ್ಚವನ್ನು ವಿತರಿಸಲಾಗಿದೆಯೇ?

ಇ) ಹಾಗಿದ್ದಲ್ಲಿ, ಯಾವಾಗ ಕೂಲಿ ಮತ್ತು ನಿರ್ವಹಣಾ ವೆಚ್ಚದ ಹಣವನ್ನು ಬಿಡುಗಡೆ ಮಾಡಲಾಗಿದೆ ಮತ್ತು ಅದರ ಮೊತ್ತವೆಷ್ಟು?

ಶ್ರೀ ಡಿ.ಟಿ.ಜಯಕುಮಾರ್ (ತೋಟಗಾರಿಕೆ ರಾಜ್ಯ ಸಚಿವರು):-

ಅ) ಶಿರಾ ತಾಲ್ಲೂಕಿನಲ್ಲಿ ಹೊಂಬಳ್ಳಿ ಯೋಜನೆಯಡಿಯಲ್ಲಿ ಒಟ್ಟು 18,851 ಕಸಿ:ಸಸಿಗಳನ್ನು 1,215 ಫಲಾನುಭವಿಗಳಿಗೆ ವಿತರಿಸಲಾಗಿದೆ. (ವಿವರಗಳನ್ನು ಅನುಬಂಧ-1ರಲ್ಲಿ ಕಾಣಿಸಲಾಗಿದೆ.

ಆ) 1995-96ನೇ ಸಾಲಿನಲ್ಲಿ ಫಲಾನುಭವಿಗಳಿಗೆ ಕೂಲಿ ಹಣ ವಿತರಿಸಲಾಗಿಲ್ಲ ಹಾಗೂ 1996-97ನೇ ಸಾಲಿನ ನಿರ್ವಹಣಾ ವೆಚ್ಚಗಳನ್ನು ಸಹ ವಿತರಿಸಲಾಗಿಲ್ಲ.

ಇ) ಉದ್ಭವಿಸುವುದಿಲ್ಲ.

ಅನುಬಂಧ

ಕ್ರಮ ಸಂಖ್ಯೆ	ಬೆಳೆಯ ಹೆಸರು	ವಿತರಿಸಲಾದ ಗಿಡಗಳ ಸಂಖ್ಯೆ	ಫಲಾನುಭವಿಗಳ ಸಂಖ್ಯೆ
1.	ಮಾವು	37,125	1,097
2.	ಸಪೋಟ	6,666	89
3.	ಹುಣಸೆ	2,000	20
4.	ದಾಳಿಂಬೆ	3,060	09
	ಮೊತ್ತ	48,851	1,215